**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಹಾಗೂ ಜೆ.ಎಮ್.ಎಫ್.ಸಿ .ನ್ಯಾಯಾಲಯ**

**ಹೊನ್ನಾವರ.**

**ಸಿ.ಸಿ. ನಂ.373/2025**

ಪಿರ್ಯಾದುದಾರರುಃ- ಕರ್ನಾಟಕ ಸರ್ಕಾರದ ಪರವಾಗಿ
ಮಂಕಿ ಪೋಲಿಸ್ ಠಾಣೆ,
ಮಂಕಿ,
ತಾಲೂಕುಃ- ಹೊನ್ನಾವರ.

**-ವಿರುದ್ಧ-**

ಆರೋಪಿತರು- 1. ತಿಮ್ಮಪ್ಪ ತಂದೆ ರಾಮಾ ಗೌಡ,
ವಯಸ್ಸು ಸುಮಾರು 62 ವರ್ಷ,
ವೃತ್ತಿಃ ನಿವೃತ್ತ ಶಿಕ್ಷಕ, ಹಾಲಿಃ ಅಂಗಡಿ ವ್ಯಾಪಾರ,
ಸಾಕೀನಃ ಕೆಳಗಿನೂರು, ಹೊಳ್ಳಾಕುಳಿ,
ತಾಃ ಹೊನ್ನಾವರ.

2. ಶ್ರೀಮತಿ ಶಾಂತಿ ತಿಮ್ಮಪ್ಪ ಗೌಡ,
ವಯಸ್ಸು ಸುಮಾರು 55 ವರ್ಷ,
ವೃತ್ತಿಃ ಮನೆ ಕೆಲಸ,
ಸಾಕೀನಃ ಕೆಳಗಿನೂರು, ಹೊಳ್ಳಾಕುಳಿ,
ತಾಃ ಹೊನ್ನಾವರ.

*******

**ಭಾರತೀಯ ನಾಗರಿಕ ಸುರಕ್ಷಾ ಸಂಹಿತೆ ಕಲಂ. 351 ರನ್ವಯ ಆರೋಪಿತರ ಹೇಳಿಕೆ.**

ಪ್ರಶ್ನೆ 1: ಅಭಿಯೋಜನೆಯ ಪರವಾಗಿ ನ್ಯಾಯಾಲಯದ ಮುಂದೆ ಸಾಕ್ಷಿದಾರರು ನುಡಿದಿರುವ ಸಾಕ್ಷ್ಯವನ್ನು ಕೇಳಿದ್ದೀರಾ?

1 ಮತ್ತು 2 ನೇ ಆರೋಪಿತರ ಉತ್ತರ : ಕೇಳಿದ್ದೇನೆ

ಪ್ರಶ್ನೆ 2: ಪಿರ್ಯಾದಿಯಾದ ಚಾಸಾ-1 ಮಂಜು ನಾಗಪ್ಪ ಗೌಡರವರು ಪ್ರಾಸಾ-1 ಎಂದು ವಿಚಾರಣೆಗೆ ಒಳಪಟ್ಟಿದ್ದು, ಅವರು ತಮ್ಮ ಸಾಕ್ಷ್ಯದಲ್ಲಿ, ಹಳ್ಳಕುಳಿಯಿಂದ ನಾಜಗಾರಕ್ಕೆ ಹೋಗುವ ಸಾರ್ವಜನಿಕ ರಸ್ತೆಯನ್ನು ಆರೋಪಿತರಾದ ನೀವು ಕಲ್ಲು ಕಟ್ಟಿ ಹಾಗೂ ಮುಳ್ಳು ಹಾಕಿ ಬಂದ್ ಮಾಡಿದ್ದು, ತಾನು ಹಾಗೂ ಸಾರ್ವಜನಿಕರು ಸೇರಿ ದಾರಿ ಯಾಕೆ ಬಂದ್ ಮಾಡಿದ್ದೀರಿ ಎಂದು ಕೇಳಲು ಹೋದಾಗ

ಆರೋಪಿತರಾದ ನೀವು ಅದು ತಮ್ಮ ಮಾಲ್ಕಿ ಜಾಗ ಅದನ್ನು ಕೇಳಲು ನೀವ್ಯಾರು ಎಂದು ಹೇಳಿದ್ದಾಗಿ ಸಾಕ್ಷ್ಯವನ್ನು ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

1 ಮತ್ತು 2 ನೇ ಆರೋಪಿತರ ಉತ್ತರ: ಸುಳ್ಳು

ಪ್ರಶ್ನೆ 3: ಫ್ರಾಸಾ-1 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ದಿಃ 08-01-2025 ರಂದು ಬೆಳಗ್ಗೆ 9-45 ಗಂಟೆಗೆ ತಾನು ಮನೆಯಿಂದ ಹೈವೆಗೆ ಹೋದಾಗ ಅಲ್ಲಿಗೆ ಬಂದ ಆರೋಪಿತರಾದ ನೀವು ತನ್ನನ್ನು ಉದ್ದೇಶಿಸಿ ಬೋಳಿಮಗ, ಸೂಳೆಮಗ ಎಂದು ಅವಾಚ್ಯವಾಗಿ ಬೈದಿದ್ದು, ಆ ಸಮಯಕ್ಕೆ ಚಾಸಾ4 ರಿಂದ 6 ರವರು ಜಗಳವನ್ನು ತಪ್ಪಿಸಿದ್ದು, ನಂತರ ತಾನು ಮಂಕಿ ಠಾಣೆಗೆ ಹೋಗಿ ಈ ಬಗ್ಗೆ ದೂರನ್ನು ನೀಡಿದ್ದು, ತದನಂತರ ಮಾನ್ಯ ನ್ಯಾಯಾಲಯದ ಅನುಮತಿಗಾಗಿ ಕಳುಹಿಸಿದ್ದು, ದಿಃ 10-01-2025 ರಂದು ನ್ಯಾಯಾಲಯದ ಅನುಮತಿ ಪಡೆದು ಠಾಣೆಗೆ ನೀಡಿದ್ದು, ಆ ಪ್ರಕಾರ ಪ್ರಕರಣವನ್ನು ದಾಖಲಿಸಿಕೊಂಡಿರುತ್ತಾರೆ ಎಂದು ಸಾಕ್ಷ್ಯವನ್ನು ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

1 ಮತ್ತು 2 ನೇ ಆರೋಪಿತರ ಉತ್ತರ: ಸುಳ್ಳು

ಪ್ರಶ್ನೆ 4: ಫ್ರಾಸಾ-1 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ದಿಃ 11-01-2025 ರಂದು ಪೊಲೀಸರು ಸ್ಥಳ ಪಂಚನಾಮೆಗೆ ಬಂದಿದ್ದು, ಆ ಸಮಯಕ್ಕೆ ಪೊಲೀಸರು ಚಾಸಾ2 ಮತ್ತು 3 ರವರನ್ನು ಪಂಚರಾಗಿ ಕರೆದಿದ್ದು, ಸ್ಥಳವನ್ನು ತಾನು ತೋರಿಸಿದಂತೆ ಸ್ಥಳದಲ್ಲಿ ಪಂಚನಾಮೆಯನ್ನು ಬೆಳಗ್ಗೆ 11-30 ರಿಂದ 12-30 ವರೆಗೆ ಮಾಡಿ ತಮ್ಮ ಸಹಿ ಪಡೆದಿದ್ದು, ಆ ಕಾಲಕ್ಕೆ ಭಾವಚಿತ್ರವನ್ನು ತೆಗೆದಿದ್ದಾಗಿ ಸಾಕ್ಷ್ಯವನ್ನು ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

1 ಮತ್ತು 2 ನೇ ಆರೋಪಿತರ ಉತ್ತರ: ಸುಳ್ಳು

ಪ್ರಶ್ನೆ 5: ಘಟನ ಸ್ಥಳದ ಪಂಚರಾದ ಚಾಸಾ-2 ಅಶೋಕ ಹೊನ್ನಪ್ಪ ನಾಯ್ಕರವರು ಫ್ರಾಸಾ-2 ಎಂದು ವಿಚಾರಣೆಗೆ ಒಳಪಟ್ಟಿದ್ದು, ಅವರು ತಮ್ಮ ಸಾಕ್ಷ್ಯದಲ್ಲಿ, ದಿಃ 11-01-2025 ರಂದು ಪೊಲೀಸರು ಘಟನಾ ಸ್ಥಳದ ಪಂಚನಾಮೆಗೆ ಬಂದಿದ್ದು, ಆ ಸಮಯದಲ್ಲಿ ತಾನು ಗದ್ದೆಯಲ್ಲಿ ಕೆಲಸ ಮಾಡುತ್ತಿದ್ದು, ಚಾಸಾ1 ರವರು ಪೋಲೀಸರನ್ನು ಅಲ್ಲಿಗೆ ಕರೆತಂದಿದ್ದು, ಪೊಲೀಸರು ತಮ್ಮನ್ನು ಘಟನಾ ಸ್ಥಳದಲ್ಲಿ ಪಂಚನಾಮೆಯ ಕಾಲಕ್ಕೆ ಪಂಚರಾಗಿ ಬರುವಂತೆ ಕರೆದು ತನ್ನನ್ನು ಹಾಗೂ ಚಾಸಾ3 ರವರನ್ನು ಪಂಚರನ್ನಾಗಿ ಬರಮಾಡಿಕೊಂಡಿದ್ದು, ಚಾಸಾ1 ಮತ್ತು 1 ಮತ್ತು 2 ನೇ ಆರೋಪಿತರಾದ ನಿಮ್ಮ ನಡುವೆ ಆದ ಗಲಾಟೆಗೆ ಸಂಬಂಧಿಸಿದಂತೆ ಸ್ಥಳ ಪರಿಶೀಲನೆಗೆ ಬಂದಿದ್ದು, ಚಾಸಾ1 ರವರು ತೋರಿಸಿದ ಸ್ಥಳದಲ್ಲಿ ನಿಪಿ3 ರಂತೆ ಪಂಚನಾಮೆಯನ್ನು 11-30 ಯಿಂದ 12-30 ವರೆಗೆ ವಿವರವಾದ ಪಂಚನಾಮೆಯನ್ನು ತಯಾರಿಸಿ ನಿಪಿ4 ರಂತೆ ಫೋಟೋವನ್ನು ತೆಗೆದು ತನ್ನ ಸಹಿಯನ್ನು ಪಡೆದುಕೊಂಡಿದ್ದಾಗಿ ಸಾಕ್ಷ್ಯವನ್ನು ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

1 ಮತ್ತು 2 ನೇ ಆರೋಪಿತರ ಉತ್ತರ: ಸುಳ್ಳು

ಪ್ರಶ್ನೆ 6: ಸಾಕ್ಷಿದಾರರಾದ ಚಾಸಾ-4 ಮನೋಜ್ ಗೌಡರವರು ಫ್ರಾಸಾ-3 ಎಂದು ವಿಚಾರಣೆಗೆ ಒಳಪಟ್ಟಿದ್ದು, ಅವರು ತಮ್ಮ ಸಾಕ್ಷ್ಯದಲ್ಲಿ, ಎರಡು ವರ್ಷಗಳ ಹಿಂದೆ ತಿಮ್ಮಪ್ಪ ರಾಮಾ ಗೌಡ ರವರ ಬಳಿ ಊರಿನವರೆಲ್ಲರೂ ಸೇರಿ ಅನಾದಿಕಾಲದಿಂದಲೂ ಓಡಾಡಿಕೊಂಡು ಬಂದ ಕಾಲುದಾರಿಯನ್ನು ಬಿಡುವಂತೆ ಕೇಳಿಕೊಂಡರೂ 1 ನೇ ಆರೋಪಿಯಾದ ನೀವು ಸದರಿ ದಾರಿಯನ್ನು ಬಿಡದೆ ಕಾಂಪೋಂಡ ನಿರ್ಮಿಸಿದ್ದು, ಆದರೆ 1 ನೇ ಆರೋಪಿಯಾದ ನೀವು ಊರ ಜನರನ್ನು ಚಾಸಾ1 ರವರು ಸೇರಿಸಿದ್ದಾರೆ ಎಂದು ತಿಳಿದು ಚಾಸಾ1 ರವರ ಮೇಲೆ ಸಿಟ್ಟಿನಿಂದ ಇದ್ದಿದ್ದಾಗಿ ಸಾಕ್ಷ್ಯವನ್ನು ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

1 ಮತ್ತು 2 ನೇ ಆರೋಪಿತರ ಉತ್ತರ : ಸುಳ್ಳು

ಪ್ರಶ್ನೆ 7: ಫ್ರಾಸಾ-3 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ದಿಃ 08-01-2025 ರಂದು ಬೆಳಗ್ಗೆ 9-45 ಗಂಟೆಗೆ ಮನೆಯಿಂದ ಹೈವೆಗೆ ಹೋಗುವಾಗ 1 ಮತ್ತು 2 ನೇ ಆರೋಪಿತರಾದ ನೀವು ಚಾಸಾ1 ರವರಿಗೆ ಬೈಯುತ್ತಿದ್ದು, ಆಗ ತಾವು ಮನೆಯಲ್ಲಿದ್ದು, ಕೂಗಿದ ಶಬ್ದ ತಮಗೆ ಕೇಳಿದ್ದು, ತಾವು ಹೈವೆ ಕಡೆಗೆ ಹೋಗಿದ್ದು, ತಮ್ಮ ಜೊತೆಗೆ ಚಾಸಾ5 ಮತ್ತು 6 ರವರು ಘಟನಾ ಸ್ಥಳಕ್ಕೆ ಬಂದಿದ್ದು, ಆ ಸಂದರ್ಭದಲ್ಲಿ ಅವರ ತಂದೆಯವರಿಗೆ ಆರೋಪಿತರಾದ ನೀವು ಬೋಳಿಮಗನೆ, ಸೂಳೆಮಗನೆ ಎಂದು ಬೈಯುತ್ತಿದ್ದು, ತದನಂತರ ತಾವು ತಂದೆಯವರಿಗೆ ಸಮಾಧಾನ ಮಾಡಿ ವಾಪಾಸ್ಸು ಕರೆದುಕೊಂಡು ಬಂದಿದ್ದು, ತಮ್ಮನ್ನು ಪೊಲೀಸರು ವಿಚಾರಣೆ ಮಾಡಿದ್ದಾಗಿ ಸಾಕ್ಷ್ಯವನ್ನು ನುಡಿದಿರುತ್ತಾರೆ ಮತ್ತು ನ್ಯಾಯಾಲಯದಲ್ಲಿರುವ ಆರೋಪಿತರಾದ ನಿಮ್ಮನ್ನು ನೋಡಿ ಗುರುತಿಸಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

1 ಮತ್ತು 2 ನೇ ಆರೋಪಿತರ ಉತ್ತರ : ಸುಳ್ಳು

ಪ್ರಶ್ನೆ 8: ಮತ್ತೊಬ್ಬ ಸಾಕ್ಷಿದಾರರಾದ ಚಾಸಾ-5 ಮಂಜುನಾಥ ದೇವು ಗೌಡರವರು ಫ್ರಾಸಾ-4 ಎಂದು ವಿಚಾರಣೆಗೆ ಒಳಪಟ್ಟಿದ್ದು, ಅವರು ತಮ್ಮ ಸಾಕ್ಷ್ಯದಲ್ಲಿ, ದಿಃ 08-01-2025 ರಂದು 9-45 ಗಂಟೆಗೆ ಮನೆಯಿಂದ ಮಂಕಿ ಠಾಣೆಗೆ ಹೋಗಲು ಹೊರಟಿದ್ದು, ಚಾಸಾ1 ತಮ್ಮ ಸಂಗಡ ಹೋಗುವವರಿದ್ದು, ತಾನು ರೋಡಿನಲ್ಲಿ ಹೋಗುವಾಗ ಆರೋಪಿತರಾದ ನೀವು ಚಾಸಾ1 ರವರಿಗೆ ಬೈಯುತ್ತಿರುವುದನ್ನು ಕಂಡಿದ್ದಾಗಿ ಸಾಕ್ಷ್ಯವನ್ನು ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

1 ಮತ್ತು 2 ನೇ ಆರೋಪಿತರ ಉತ್ತರ : ಸುಳ್ಳು

ಪ್ರಶ್ನೆ 9: ಫ್ರಾಸಾ-4 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ಆ ಸಮಯದಲ್ಲಿ ಚಾಸಾ6 ಮತ್ತು ಚಾಸಾ4 ರವರು ಸ್ಥಳದಲ್ಲಿ ಹಾಜರಿದ್ದು, ಚಾಸಾ1 ರವರ ಮಗ ಬಂದು ಚಾಸಾ1 ರವರ ಬಳಿ

ಏನಾಯಿತು ಎಂದು ಕೇಳಿದಾಗ ಚಾಸಾ1 ರವರು ಆರೋಪಿತರಾದ ನೀವು ತನಗೆ ಏಕವಚನದಲ್ಲಿ ಅವಾಚ್ಯ ಶಬ್ಧಗಳಿಂದ ಬೈದಿರುತ್ತಾರೆ ಎಂದು ಹೇಳಿದ್ದು, ನಂತರ ತಾವು ಠಾಣೆಗೆ ಹೋಗಿ ಫಿರ್ಯಾದಿ ದಾಖಲಿಸುವಂತೆ ಹೇಳಿದ್ದು, ಈ ಬಗ್ಗೆ ತನ್ನನ್ನು ಪೊಲೀಸರು ವಿಚಾರಣೆ ಮಾಡಿದ್ದಾಗಿ ಸಾಕ್ಷ್ಯವನ್ನು ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

1 ಮತ್ತು 2 ನೇ ಆರೋಪಿತರ ಉತ್ತರ : ಸುಳ್ಳು

ಪ್ರಶ್ನೆ 10: ಮಂಕಿ ಪೋಲೀಸ್ ಠಾಣೆಯ ಎ.ಎಸಿ.ಐ, ಚಾಸಾ-10 ಅಣ್ಣಪ್ಪ ರಾಮಾ ಗೌಡರವರನ್ನು ಫ್ರಾಸಾ-5 ಎಂದು ವಿಚಾರಣೆಗೆ ಒಳಪಟ್ಟಿದ್ದು, ಅವರು ತಮ್ಮ ಸಾಕ್ಷ್ಯದಲ್ಲಿ, ದಿಃ 10-01-2025 ರಂದು ಮಂಕಿ ಪೊಲೀಸ್ ಠಾಣೆಯಲ್ಲಿ ಬೆಳಗ್ಗೆ ಎಸ್ ಹೆಚ್ ಓ ಕರ್ತವ್ಯದಲ್ಲಿದ್ದಾಗ 9-45 ಗಂಟೆಗೆ ಕೋರ್ಟ ಪಿಸಿ 561 ಮಂಜುನಾಥ ಚೆನ್ನಗುಡಿ ಇವರು ಮಾನ್ಯ ಜೆ ಎಂ ಎಫ್ ಸಿ ಹೊನ್ನಾವರ ನ್ಯಾಯಾಲಯದಿಂದ ಆದೇಶ ಸಂಖ್ಯೆ 49/2025 ನೇದ್ದರ ದಿಃ 08-01-2025 ರಂದು ಮಂಕಿ ಪೋಲೀಸ್ ಠಾಣೆಯ ಎನ್ ಸಿ ನಂ.1/2025 ರ ಆದೇಶ ಪ್ರತಿಯನ್ನು ಸ್ವೀಕರಿಸಿ ಪ್ರ.ವ.ವರದಿಯನ್ನು ದಾಖಲಿಸಿ ಮಾನ್ಯ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿದ್ದು, ನಂತರ ಅದನ್ನು ಮುಂದಿನ ತನಿಖೆಗೆ ಚಾಸಾ11 ರವರಿಗೆ ನೀಡಿದ್ದಾಗಿ ಸಾಕ್ಷ್ಯವನ್ನು ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

1 ಮತ್ತು 2 ನೇ ಆರೋಪಿತರ ಉತ್ತರ : ಸುಳ್ಳು

ಪ್ರಶ್ನೆ 11: ತನಿಖಾಧಿಕಾರಿಯಾದ, ಚಾಸಾ-11 ಕಿರಣ್ ಮುಂಗೇಶ್ ವೈದ್ಯರವರನ್ನು ಫ್ರಾಸಾ-6 ಎಂದು ವಿಚಾರಣೆಗೆ ಒಳಪಟ್ಟಿದ್ದು, ಅವರು ತಮ್ಮ ಸಾಕ್ಷ್ಯದಲ್ಲಿ, ದಿಃ 10-01-2025 ರಂದು ಮಂಜು ನಾಗಪ್ಪ ಗೌಡ ಚಾಸಾ1 ರವರು ತಾನು ಠಾಣಾ ಕರ್ತವ್ಯದಲ್ಲಿದ್ದಾಗ ನೀಡಿದ ದೂರಿನಂತೆ ದೂರನ್ನು ಸ್ವೀಕರಿಸಿ, ಠಾಣಾ ಎನ್ ಸಿ ನಂ. 1/2025 ರಂತೆ ಪ್ರಕರಣ ದಾಖಲಿಸಿಕೊಂಡು ಮಾನ್ಯ ನ್ಯಾಯಾಲಯಕ್ಕೆ ಅನುಮತಿಗಾಗಿ ನಿವೇದಿಸಿಕೊಂಡಿದ್ದು, ಮಾನ್ಯ ನ್ಯಾಯಾಲಯವು ಅದೇ ದಿವಸ ಅನುಮತಿ ನೀಡಿದ್ದು, ಚಾಸಾ10 ರವರು ಪ್ರಕರಣ ದಾಖಲಿಸಿಕೊಂಡು, ದಿಃ 11-01-2025 ರಂದು ಆ ಪ್ರಕರಣದ ಕಡತವನ್ನು ಸ್ವೀಕರಿಸಿ, ಪಂಚನಾಮೆಯನ್ನು ದಿಃ 11-01-2025 ರಂದು ಘಟನಾ ಸ್ಥಳವಾದ ಹೊಳ್ಳಕುರಿಗೆ ಭೇಟಿ ನೀಡಿ ಚಾಸಾ1 ರವರು ತೋರಿಸಿರುವ ಘಟನಾ ಸ್ಥಳವನ್ನು ಚಾಸಾ2 ಮತ್ತು 3 ರವರ ಸಮಕ್ಷಮದಲ್ಲಿ ವಿವರವಾದ ಪಂಚನಾಮೆಯನ್ನು ಬೆಳಗ್ಗೆ 11-30 ಗಂಟೆಯಿಂದ 12-30 ಗಂಟೆಯ ಅವಧಿಯಲ್ಲಿ ತಯಾರಿಸಿ, ಛಾಯಚಿತ್ರ ತೆಗೆಸಿದ್ದಾಗಿ ಸಾಕ್ಷ್ಯವನ್ನು ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

1 ಮತ್ತು 2 ನೇ ಆರೋಪಿತರ ಉತ್ತರ : ಸುಳ್ಳು

ಪ್ರಶ್ನೆ 12: ಫ್ರಾಸಾ-6 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ಚಾಸಾ4 ರಿಂದ 6 ರವರ ಹೇಳಿಕೆಯನ್ನು ಸ್ವೀಕರಿಸಿಕೊಂಡು ಕಡತಕ್ಕೆ ಅಳವಡಿಸಿಕೊಂಡಿದ್ದು, ನಂತರ ಆಪಾದಿತರಿಗೆ ನೋಟೀಸನ್ನು

ಜಾರಿ ಮಾಡಿದ್ದು, ನಂತರ ದಿಃ 18-01-2025 ರಂದು ಭೂ ದಾಖಲೆಗಳ ನಿರ್ದೇಶಕರಿಗೆ ಘಟನಾ ಸ್ಥಳದ ದಾಖಲಾತಿಯನ್ನು ಒದಗಿಸಲು ನಿವೇದಿಸಿಕೊಂಡಿದ್ದು, ನಂತರ ಅವರಿಂದ ದಿಃ 29-01-2025 ರಂದು ಮಾಹಿತಿಯನ್ನು ಸ್ವೀಕರಿಸಿಕೊಂಡು ಕಡತಕ್ಕೆ ಅಳವಡಿಸಿಕೊಂಡಿದ್ದು, ನಂತರ ಚಾಸಾ8 ಮತ್ತು 9 ರವರು ನೀಡಿದ 63(4)(ಸಿ) ಬಿ ಎಸ್ ಎ ಅಡಿಯಲ್ಲಿ ನೀಡಿದ ಪ್ರಮಾಣ ಪತ್ರವನ್ನು ಸ್ವೀಕರಿಸಿಕೊಂಡು ಕಡತಕ್ಕೆ ಅಳವಡಿಸಿಕೊಂಡು ದೋಷಾರೋಪಣಾ ಪಟ್ಟಿಯನ್ನು ಮಾನ್ಯ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿದ್ದಾಗಿ ಸಾಕ್ಷ್ಯವನ್ನು ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

1 ಮತ್ತು 2 ನೇ ಆರೋಪಿತರ ಉತ್ತರ : ಸುಳ್ಳು

ಪ್ರಶ್ನೆ 13: ಈ ಪ್ರಕರಣದ ಕುರಿತು ನೀವು ಏನಾದರೂ ಹೇಳುವುದಿದೆಯೇ?

1 ಮತ್ತು 2 ನೇ ಆರೋಪಿತರ ಉತ್ತರ : ಇದೆ

ಪ್ರಶ್ನೆ 14: ನಿಮ್ಮ ಪರವಾಗಿ ಸಾಕ್ಷಿ ಪುರಾವೆಗಳನ್ನು ಒದಗಿಸುವಿರಾ?

1 ಮತ್ತು 2 ನೇ ಆರೋಪಿತರ ಉತ್ತರ : ಹೌದು

(ಈ ಮೇಲಿನ ದೋಷಾರೋಪಣೆಯನ್ನು ಆರೋಪಿತರಿಗೆ ಗೊತ್ತಿರುವ ಕನ್ನಡ ಭಾಷೆಯಲ್ಲಿ ಓದಿ ಹೇಳಿ ವಿವರಿಸಿದ ನಂತರ ಆರೋಪಿತರು ನೀಡಿರುವ ಉತ್ತರಗಳನ್ನು ನನ್ನ ಸ್ವಹಸ್ತಾಕ್ಷರಗಳಿಂದ ಬರೆದು ಕೊಳ್ಳಲಾಗಿದೆ ಎಂದು ಈ ಮೂಲಕ ದೃಢಿಕರಿಸುತ್ತೇನೆ)

ಸಹಿ ಇದೆ/-

**ದಿನಾಂಕಃ- 17-08-2026.**

**(ನವೀನ್ ಕೋಪರ್ಡೆ).,**
**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಮ್.ಎಫ್.ಸಿ.ರವರ ನ್ಯಾಯಾಲಯ.,ಹೊನ್ನಾವರ.**

*******

1 ನೇ ಆರೋಪಿಯ ಸಹಿಃ- ಸಹಿ ಇದೆ

2 ನೇ ಆರೋಪಿಯ ಸಹಿಃ- ಸಹಿ ಇದೆ